# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## **SPL**.**C** –797/2023

| ಸಾಕ್ಷಿದಾರರ ಹೆಸರು | : | ವಿಷಕಂಠ | ಫ್ರಾಸಾ: | 3 |
|---|---|---|---|---|
| ತಂದೆ ಹೆಸರು | : | ಗೋವಿಂದರಾಜು | ಚಾಸಾ: | 2 |
| ವಯಸ್ಸು | : | 36 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ: **15.07.2026.** | |
| ವೃತ್ತಿ | : | ವ್ಯವಸಾಯ | | |
| ವಾಸ ಸ್ಥಳ | : | ದೊಡ್ಡಬರ್ಗಿ ಹೆಚ್ ಡಿ ಕೋಟೆ ತಾಲ್ಲೂಕು | | |

**<u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ</u>**:

1. ಚಾಸಾ–1, ಚಾಸಾ–4 ರಿಂದ 9 ರವರು ನನಗೆ ಗೊತ್ತು. ಆರೋಪಿಗಳು ನನಗೆ ಗೊತ್ತು. ಈಗ ಸುಮಾರು 3 ವರ್ಷಗಳ ಹಿಂದೆ ನಾನು ಮತ್ತು ಚಾಸಾ–3 ರವರು ಜಮೀನಿನಲ್ಲಿ ಕೆಲಸ ಮಾಡುತ್ತಿರಬೇಕಾದರೆ Forest Department ನವರು ನನ್ನ ಮತ್ತು ಚಾಸಾ–3 ರವರ ಸಹಿಯನ್ನು ಒಂದು ದಾಖಲಾತಿಯ ಮೇಲೆ ಪಡೆದುಕೊಂಡಿರುತ್ತಾರೆ. ಸದರಿ ದಾಖಲಾತಿಯಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಹಿಯನ್ನು ಯಾವ ಕಾರಣಕ್ಕಾಗಿ ಪಡೆದುಕೊಳ್ಳಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರಿಗೆ ನಿಪಿ–2 ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿದಾರರು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು **ನಿಪಿ–2(ಸಿ)** ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮುದ್ದೆ ಮಾಲು– 1 ಮತ್ತು 2 ನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಅದರ ಮೇಲೆ ಇರುವ ಚೀಟಿಯಲ್ಲಿರುವ ಸಹಿ ತನ್ನದಾಗಿರುವುದಿಲ್ಲ ಎಂದು ನುಡಿಯುತ್ತಾರೆ.

2. ಸಾಕ್ಷಿಗೆ ದಿ– 13.01.2022 ರ ನೋಟಿಸ್ ನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ಸಹಿ ತನ್ನದ್ದಲ್ಲ ಎಂದು ನುಡಿಯುತ್ತಾರೆ. ನಿಪಿ–3 ರಿಂದ 8 ಪೋಟೋಗಳನ್ನು ಎಲ್ಲಿ ಮತ್ತು ಯಾವ ಕಾರಣಕ್ಕಾಗಿ ತೆಗೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**(ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸರ್ಕಾರಿ ಅಭಿಯೋಜಕರವರಿಂದ :**

3. ದಿ– 13.01.2023 ರಂದು ದೊಡ್ಡಬರ್ಗಿ ಗ್ರಾಮದ ಆರೋಪಿ ಗೋಪಾಲ ರವರಿಗೆ ಸೇರಿದ ಸರ್ವೇ ನಂ.36 ರ ಜಮೀನಿನಲ್ಲಿ ಆರೋಪಿಗಳು ಅಕ್ರಮವಾಗಿ ದೊಣ್ಣೆ ಮತ್ತು ಅಲ್ಯೂಮಿನಿಯ ತಂತಿಯನ್ನು ಬಳಸಿ ವಿದ್ಯುತ ಹರಿಸಿದ್ದರಿಂದ ಆನೆ ಸಾವಿಗೆ ಕಾರಣರಾದ ಹಿನ್ನಲೆಯಲ್ಲಿ ಪೊಲೀಸರು ವಲಯ ಅರಣ್ಯಾಧಿಕಾರಿಗಳು, ನನ್ನ ಮತ್ತು ಚಾಸಾ–3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿಲು ನೋಟಿಸ್ ನ್ನು ನೀಡಿ ಹಾಜರಿರುವಂತೆ ಹೇಳಿದ ಮೇರೆಗೆ ನಾನು ಮತ್ತು ಚಾಸಾ–3 ರವರು ಸ್ಥಳದಲ್ಲಿ ಹಾಜರಿದ್ದೆವು ಎಂದರೆ ಸರಿಯಲ್ಲ. ಮಧ್ಯಾಹ್ನ 2.30 ರಿಂದ 4 ಗಂಟೆವರೆಗೆ ಪೊಲೀಸರು ನನ್ನ ಮತ್ತು ಚಾಸಾ–3 ರವರ ಸಮಕ್ಷಮ ನಿಪಿ–2 ರಂತೆ ಪಂಚನಾಮೆಯನ್ನು ಜರುಗಿಸಿ ಮು.ಮಾ–1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ–3 ರಿಂದ 8 ಪೋಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನೋಟಿಸ್ ಮತ್ತು ಮು.ಮದ್ದೆಮಾಲಿನ ಮೇಲೆ ಇರುವ ಚೀಟಿಗಳ ಮೇಲೆ ಇರುವ ಸಹಿಗಳು ನನ್ನದ್ದಾಗಿರುತ್ತವೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಈ ದಿನ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿಗಳ ಪರ ವಕೀಲರಿಂದ :**

4. ಇಲ್ಲ.

**ಮರುವಿಚಾರಣೆ : ಇಲ್ಲ**

(ನನ್ನ ಉ ಮೇ ತೆ ನ್ಯಾ.ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

**(ಸಂಧ್ಯಾ ರಾವ್ ಪಿ)**
**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.,**
**ಮೈಸೂರು.**